ಜೀವವಹಿಯನ್ನು ಸರಿಪಡಿಸುವ ಬಗ್ಗೆ ಈ ಕೆಳಗೆ ಹೇಳಲಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಕರ್ನಾಟಕ ಲೋಕಸೇವಾ ಆಯೋಗ ಇಲಾಖಾ ನೇಮಕಾತಿ ಸಮಿತಿಗಳು ನಿಗಮ:ಮಂಡಳಿಗಳು ಇತ್ಯಾದಿಗಳ ಮೂಲಕ ಉದ್ಯೋಗ ಪಡೆದ ಅಭ್ಯರ್ಥಿಗಳ ನೊಂದಣಿ ದಾಖಲೆಗಳನ್ನು ತೆಗೆದುಹಾಕಲಾಗುತ್ತಿದೆ.

2) ವಿವಿಧ ಇಲಾಖೆಗಳು, ನಿಗಮಗಳನ್ನು ಮಂಡಳಿಗಳು ಇತ್ಯಾದಿಗಳಲ್ಲಿ ಅನುಕಂಪದ ಆಧಾರದ ನೇಮಕಾತಿ ಹೊಂದುವ ಅಭ್ಯರ್ಥಿಗಳ ನೊಂದಣಿ ದಾಖಲೆಗಳನ್ನು ತೆಗೆದುಹಾಕಲಾಗುತ್ತಿದೆ.

3) ನಿಗಧಿತ ಸಮಯದಲ್ಲಿ ನವೀಕರಿಸದ ಅಭ್ಯರ್ಥಿಗಳ ದಾಖಲೆಗಳನ್ನು ತೆಗೆದುಹಾಕಲಾಗುತ್ತಿದೆ.

4) ಉದ್ಯೋಗ ವಿನಿಮಯ ಕೇಂದ್ರಗಳ ಮುಖಾಂತರ ಉದ್ಯೋಗ ಪಡೆದ ಅಭ್ಯರ್ಥಿಗಳ ನೊಂದಣಿ ದಾಖಲೆಗಳನ್ನು ತೆಗೆದುಹಾಕಲಾಗುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ಹಾಲಿ ಇರುವ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಂಘದ ಮಳಿಗೆಗಳ ಬಗ್ಗೆ

753 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯಲ್ಲಿ ಹಾಲಿ ಇರುವ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಂಘದ ಮಳಿಗೆಗಳು ಎಷ್ಟು?*

ಆ) *1991ರಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಮಾರಾಟ ಮಳಿಗೆಗಳನ್ನು ತೆರೆಯುವ ಪ್ರಸ್ತಾವನೆ ಇದೆ?*

ಇ) *ಮಾರಾಟ ಮಳಿಗೆಗಳನ್ನು ತೆರೆಯಲು ಉದ್ದೇಶಿತ ಸ್ಥಳಗಳು ಯಾವುವು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಗೆ ಸಚಿವರು):

ಅ) ತುಮಕೂರು ನಗರದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿರುವ ಒಂದು ಮಾರಾಟ ಮಳಿಗೆ ಮಾತ್ರ.

ಆ) 12 (ಹನ್ನೆರಡು)

ಇ) ಈ ಕೆಳಕಂಡ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆಯಲು ಉದ್ದೇಶಿಸಿದೆ.

1. ಜಿಲ್ಲಾ ತೋಟಗಾರಿಕೆ ಅಧಿಕಾರಿಗಳ ಕಛೇರಿ ಆವರಣ.
2. ಸರ್ಕಾರಿ ಆಸ್ಪತ್ರೆ ಆವರಣ.
3. ಸೋಮೇಶ್ವರಪುರ ಬಡಾವಣೆ.
4. ಎಂ.ಜಿ.ರಸ್ತೆ.
5. ಡೀಲಕ್ಸ್ ಉಡ್‌ಲ್ಯಾಂಡ್ ಹೋಟೆಲ್ ಆವರಣ
6. ಮಂಡೀಪೇಟ್.
7. ಜಿಲ್ಲಾಧಿಕಾರಿಗಳ ಕಛೇರಿ ಆವರಣ
8. ಎಡಿಯೂರು.
9. ಕುಣಿಗಲ್.
10. ತಿಪಟೂರು
11. ಶಿರಾ ಬಸ್ ನಿಲ್ದಾಣ.
12. ಪಾವಗಡ